

ಗ್ರಾಮೀಣ ಭಾಗದಲ್ಲಿ ಸಾಮೂಹಿಕವಾಗಿ ಅಡಿಕೆ ಸುಲಿಯುವ ವ್ಯವಸ್ಥೆ

ಕಳೆನಾಶಕ ಸಿಂಪಡಣೆ ವ್ಯಾಪಕವಾಗಿದೆ. ಇದು ಕೂಡ ಭೂಮಿಯ ಆಯಸ್ಸು ಕ್ಷೀಣಿಸುತ್ತಿದೆ. ಇಂಥ ಮಾನವ ನಿರ್ಮಿತ ಬಾಧೆಗಳ ಜತೆಗೆ ಅನಿಯಮಿತ ಮಳೆ ಹಾಗೂ ವಾತಾವರಣ ವೈಪರೀತ್ಯಗಳು ಕೂಡ ಅಡಿಕೆ ಕೃಷಿಗೆ ವಿರೋಧ ಒಡ್ಡುತ್ತಿವೆ. ಅತಿಯಾದ ನೀರು ಬೇಡುವ ಅಡಿಕೆಗೆ ಬಯಲು ನಾಡಿನಲ್ಲಿ ನೀರಾವರಿಗಾಗಿ ಬೋರ್‌ವೆಲ್‌ಗಳು ಹೆಚ್ಚಾಗುತ್ತಿವೆ. ಇದು ಅಂತರ್ಜಲ ಕುಸಿತಕ್ಕೆ ಕಾರಣವಾಗುತ್ತಿದೆ. ಭವಿಷ್ಯದಲ್ಲಿ ಇನ್ನಷ್ಟು ಪ್ರಯೋಗಗಳಿಗೆ ಒಡ್ಡಿಕೊಳ್ಳುವ ಸಾಧ್ಯತೆ ಅಡಿಕೆ ಕ್ಷೇತ್ರದಲ್ಲಿದ್ದರೂ ಅಡಿಕೆ ಕೃಷಿ ಉಳಿಸಿಕೊಳ್ಳಲು ಮತ್ತಷ್ಟು ಪ್ರಯೋಗಗಳ ಅಗತ್ಯವಿದೆ' ಎನ್ನುತ್ತಾರೆ ಅಡಿಕೆ ಕುರಿತು ಆಳವಾದ ಅಧ್ಯಯನ ನಡೆಸುತ್ತಿರುವ ಪರಿಸರ ಬರಹಗಾರ ಶಿವಾನಂದ ಕಳವೆ.

## ತೋಟದ ಜ್ಞಾನ ವೃದ್ಧಿಸಿಕೊಳ್ಳಿ

'ಅಸಾಂಪ್ರದಾಯಿಕ ಪ್ರದೇಶಗಳಲ್ಲಿ ಅಡಿಕೆ ಕ್ಷೇತ್ರ ವಿಸ್ತರಣೆ ಇಂದಿನ ಸವಾಲಾಗಿದೆ. ಇದು ಕೇವಲ ಸಾಂಪ್ರದಾಯಿಕ ಕೃಷಿಕರ ಅಡಿಕೆ ಮಾರುಕಟ್ಟೆಯಷ್ಟೇ ಅಲ್ಲದೇ ಇಡೀ ಆಹಾರ ವ್ಯವಸ್ಥೆಗೂ ಧಕ್ಕೆ ನೀಡುವ ಸಾಧ್ಯತೆಯಿದೆ. ಬಯಲು ನಾಡಿನ ಆಹಾರ ಬಟ್ಟಲುಗಳಲ್ಲಿ ಇಂದು ಅಡಿಕೆ ವಿಜೃಂಭಿಸುತ್ತಿರುವುದೂ ಇದಕ್ಕೆ ಪ್ರಮುಖ ಕಾರಣ' ಎನ್ನುವ ಅವರು, 'ಈಗ ಕೃಷಿಯಲ್ಲಿರುವ ತಲೆಮಾರು 60 ವರ್ಷ ಮೇಲ್ಪಟ್ಟವರಾಗಿದ್ದಾರೆ. ಅಡಿಕೆ ತೋಟಕ್ಕೆ ಈಗಲೇ ವಿವಿಧ ರೋಗಬಾಧೆ ವಿಪರೀತವಾಗಿದೆ. ವೃದ್ಧನಿಗೆ ಬಾಧೆ ಹಿಡಿದಂತಹ ಸಂದರ್ಭ ಇದಾಗಿದೆ. ಪ್ರಯೋಗಾಲಯದಲ್ಲಿ ಯಶಸ್ವಿಯಾಗುವುದಕ್ಕೂ ಭೂಮಿಯಲ್ಲಿ ಯಶಸ್ವಿಯಾಗುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ ಎಂಬುದನ್ನು ಅಡಿಕೆ ರೋಗದ ಸಂಬಂಧ ನಡೆಯುವ ಸಂಶೋಧನೆಗಳು, ಸಿಂಪಡಿಸುವ ಔಷಧಿಗಳು ಸಾಕ್ಷಿಯಾಗುತ್ತಿವೆ. ಅಂಥ 'ತೋಟದ ಜ್ಞಾನ' ಬೆಳೆಗಾರರು ವೃದ್ಧಿಸಿಕೊಳ್ಳಬೇಕು' ಎನ್ನುತ್ತಾರೆ ಕಳವೆ.



ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳ ಕೆಲವು ಸಹಕಾರ ಸಂಘಗಳಲ್ಲಿ ಕಾರ್ಮಿಕರಿಗೆ ತರಬೇತಿ ನೀಡಿ ನೆಲದಿಂದಲೇ ಉಪಕರಣ ಬಳಸಿ ಕೊನೆ ಕೊಯ್ಲು, ಮದ್ದು ಸಿಂಪಡಣೆ ಮಾಡುವ 'ದೋಟಿ' ಉಪಕರಣ ಬಳಸಿ ಕೆಲಸ ಮಾಡುವ ವಿಧಾನ ಪರಿಚಯಿಸಲಾಗಿದೆ. ಇದರಿಂದ ಹಲವು ಕೌಶಲಯುತ ಕಾರ್ಮಿಕರು ಕೊಯ್ಲು ಕಾರ್ಯ ನಡೆಸುತ್ತಿದ್ದಾರೆ. ಸದ್ಯದ ಅಡಿಕೆ ಕೃಷಿ ಕ್ಷೇತ್ರದಲ್ಲಿ ತಲಸ್ಪರ್ಶಿಯಾಗುವ ಎಲ್ಲ ಅರ್ಹತೆ ದೋಟಿಗಿದೆ. ಇದರಂತೆ ಉಳಿದ ಉಪಕರಣಗಳೂ ತಲಸ್ಪರ್ಶಿಯಾಗುವತ್ತ ನಿರ್ಮಾಣ ಆಗಬೇಕು.

**-ಮಂಜುನಾಥ ಭಟ್ ಶಿರಸಿ,**
ಪ್ರಗತಿಪರ ಕೃಷಿಕ

### ಸಂಶೋಧನೆ ನಡೆಯಲಿ

ಹಳದಿ ಎಲೆ ರೋಗ (ಚಂಡಿ ರೋಗ), ಎಲೆಚುಕ್ಕಿ ರೋಗ ಮತ್ತು ಕೊಳೆ ರೋಗ (ಮಹಾಲಿ) ದಂತಹ ಸಮಸ್ಯೆಗಳು ಅಡಿಕೆ ಇಳುವರಿಯನ್ನು ಗಣನೀಯವಾಗಿ ಕಡಿಮೆ ಮಾಡುತ್ತವೆ. ಈ ರೋಗಗಳ ನಿರ್ವಹಣೆ ಬಗ್ಗೆ ಜ್ಞಾನದ ಕೊರತೆ ರೈತರಲ್ಲಿದೆ. ಇವುಗಳ ನಿಯಂತ್ರಣ ವಿಜ್ಞಾನಿಗಳಿಗೂ ಸವಾಲಾಗಿದೆ. ಕೃಷಿ ಯಾಂತ್ರೀಕರಣದ ಜತೆಜತೆಗೆ ಇಂಥ ರೋಗಗಳ ನಿಯಂತ್ರಣಕ್ಕೆ ಹೆಚ್ಚಿನ ಪ್ರಯೋಗ ನಡೆಸಿ ಫಲ ಕಂಡುಕೊಳ್ಳುವ ಅಗತ್ಯವಿದೆ ಎಂಬುದು ಎಲ್ಲ ಅಡಿಕೆ ಬೆಳೆಗಾರರ ಮಾತಾಗಿದೆ.

## ಪರಿಸ್ಥಿತಿಯ ಅನಿವಾರ್ಯೆ

'ಮೊದಲೆಲ್ಲ ದೊಡ್ಡ ಕುಟುಂಬ, ಮನೆ ಮಂದಿಯೇ ಕೆಲಸ ಮುಗಿಸಿಕೊಳ್ಳುತ್ತಿದ್ದರು. ಅವರೇ ಅಡಿಕೆ ಸುಲಿದುಕೊಳ್ಳುತ್ತಿದ್ದರು. ಈಗ ವಿಭಕ್ತ ಕುಟುಂಬಗಳ ಸಂಖ್ಯೆ ಹೆಚ್ಚು. ಪ್ರತಿ ಬೆಳೆಗಾರನೂ ಅಡಿಕೆ ಸುಲಿಯಲು ಬೇರೆಯವರನ್ನು ಅವಲಂಬಿಸಬೇಕಾದ ಸ್ಥಿತಿ. ಕೆಲವು ಊರುಗಳಲ್ಲಿ ಮುರಿ ಆಳಿನ ಲೆಕ್ಕದಲ್ಲಿ ಅಡಿಕೆ ಸುಲಿಯುವ ಪದ್ಧತಿ ಇದೆ. ಕೆಲ ಕಡೆ ಸಾವಿರ ಅಥವಾ ಡಬ್ಬಿ ಲೆಕ್ಕದಲ್ಲಿ ಅಡಿಕೆ ಸುಲಿದು ಕೂಲಿ ಕೊಡುವ ಪದ್ಧತಿ ಇದೆ. ಎಲ್ಲ ಬೆಳೆಗಾರರ ಮನೆಗಳಲ್ಲೂ ಒಂದೇ ಕಾಲಕ್ಕೆ ಕೊಯ್ಲು ಶುರುವಾಗುವುದರಿಂದ, ಸುಲಿಯುವ ಜನರ ಕೊರತೆ ಕಾಡುತ್ತದೆ. ಇರುವ ಮಂದಿಯಾದರೂ, ಹೆಚ್ಚು ಕೂಲಿ ಕೊಡುವ ಕಡೆ ಮಾತ್ರ ಹೋಗುತ್ತಾರೆ. ಸಣ್ಣ ಹಿಡುವಳಿದಾರರಿಗೆ ಇದರಿಂದ ತೊಂದರೆ. ಪರ್ಯಾಯ ವ್ಯವಸ್ಥೆಗೆ ಹೊಂದಿಕೊಳ್ಳುವುದು ಈಗ ಬೆಳೆಗಾರರಿಗೆ ಅನಿವಾರ್ಯ. ಕೂಲಿಗಳು ಸುಲಿದಂಥ ನಾಜೂಕುತನ ಯಂತ್ರಗಳಿಂದ ಆಗದೇ ಇದ್ದರೂ, ಪರಿಸ್ಥಿತಿಯ ಅನಿವಾರ್ಯದಿಂದಾಗಿ ಮರು ಮಾತಾಡುವಂತಿಲ್ಲ' ಎನ್ನುತ್ತಾರೆ ಕೃಷಿಕರು.



ಕೊಯ್ಲು ಮಾಡಿದ ಅಡಿಕೆ ಸಾಗಿಸಲು ಟ್ರ್ಯಾಕ್ಟರ್ ಬಳಕೆ

ಪ್ರತಿಕ್ರಿಯಿಸಿ: feedback@sudha.co.in